(ಇಂದು ದಿನಾಂಕ:**13/01/2026** ರಂದು ಆದೇಶ ದಿನಾಂಕ:**08/12/2025** ರಂತೆ ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.)

**ಮುಂದುವರೆದ ಮುಖ್ಯ ವಿಚಾರಣೆ: 5 ನೇ ಎದುರುದಾರರ ಪರ ಶ್ರೀ ಜಿ.ಎನ್.ಜಿ. ವಕೀಲರಿಂದ:-**

8. ನಾನು ಹಾಜರುಮಾಡಿದ ಓ.ಎಸ್. ನಂ.194/2014 ರ ಡಿಕ್ರಿ ಪ್ರತಿಯನ್ನು ನಿಆರ್-33, ನಾನು ಭೂಸ್ವಾಧೀನಾಧಿಕಾರಿಗಳಿಗೆ ಸಲ್ಲಿಸಿದ ಮನವಿಯನ್ನು ನಿಆರ್-34 ಎಂದು ಗುರುತಿಸಲಾಯಿತು. *(ಓ.ಎಸ್. ನಂ.194/2014 ರಲ್ಲಿ 1 ನೇ ಎದುರುದಾರ ಮಲ್ಲಿಕಾರ್ಜುನ ಡಿಬ್ಲ್ಯೂ-1 ಎಂದು ನೀಡಿದ ಸಾಕ್ಷಿಯನ್ನು ಗುರುತಿಸಲು 5 ನೇ ಎದುರುದಾರರ ಪರ ವಕೀಲರು ಮನವಿ ಮಾಡಿಕೊಂಡಿದ್ದು, ಈ ಮುಂಚೆ ಒಬ್ಬ ವ್ಯಕ್ತಿ ನೀಡಿದ ಸಾಕ್ಷಿ ಅಥವಾ ಹೇಳಿಕೆಯನ್ನು ಅದೇ ವ್ಯಕ್ತಿ ಬೇರೆ ಪ್ರಕರಣದಲ್ಲಿ ಸಾಕ್ಷಿ ನೀಡುವಾಗ ತೋರಿಸಿ, ಕೇಳಿ, ಹಾಜರುಮಾಡಲು ಅವಕಾಶ ಇರುವುದರಿಂದ ಮನವಿಯನ್ನು ತಳ್ಳಿಹಾಕಲಾಯಿತು.)*

**ಪಾಟೀ ಸವಾಲು 1 ಮತ್ತು 4 ನೇ ಎದುರುದಾರ ಹಾಗೂ 2 ಮತ್ತು 3 ನೇ ಎದುರುದಾರರ ವಾರಸುದಾರರ ಪರ ಶ್ರೀ ಎಸ್.ಯು.ಜಿ. (ಯು.ಎಸ್.ಜಿ.) ವಕೀಲರಿಂದ:-**

*(ವಕೀಲರ ವಿನಂತಿ ಮೇರೆಗೆ ಮಧ್ಯಾಹ್ನದವರೆಗೆ ಮುಂದೂಡಲಾಯಿತು.)*

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.

(ಇಂದು ದಿನಾಂಕ:**13/01/2026** ರಂದು ಮಧ್ಯಾಹ್ನ ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.)

**ಪಾಟೀ ಸವಾಲು 1 ಮತ್ತು 4 ನೇ ಎದುರುದಾರ ಹಾಗೂ 2 ಮತ್ತು 3 ನೇ ಎದುರುದಾರರ ವಾರಸುದಾರರ ಪರ ಶ್ರೀ ಎಸ್.ಯು.ಜಿ. (ಯು.ಎಸ್.ಜಿ.) ವಕೀಲರಿಂದ:-**

9. ನಿಆರ್-33 ಮತ್ತು 34 ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳಲ್ಲ ಎನ್ನುವುದು ಸುಳ್ಳು. ಆಸ್ತಿಯನ್ನು ನನ್ನ ಗಂಡ 1 ನೇ ಎದುರುದಾರರ ತಂದೆಯ ಅನುಮತಿ ಮೇರೆಗೆ ಅನುಭವಿಸುತ್ತಿದ್ದರು ಎನ್ನುವುದು ಸುಳ್ಳು. ಹನುಮಂತಗೌಡ ಎನ್ನುವವರಿಂದ ಭೂಬಾಡಿಗೆ ಪಡೆದಿದ್ದರು. ಹನುಮಂತಗೌಡ ಮತ್ತು ನನ್ನ ಗಂಡ ಮಾಡಿಕೊಂಡ ಭೂಬಾಡಿಗೆ ದಾಖಲೆಯನ್ನು

ಹಾಜರುಮಾಡಿಲ್ಲ. ಆದರೆ ಇತರೇ ದಾಖಲೆ ಹಾಜರುಮಾಡಿದ್ದೇವೆ. ಆಸ್ತಿ ಹಗನುಮಂತಗೌಡ ಎನ್ನುವವರ ಹೆಸರಿಗೆ ಇತ್ತೋ ಇಲ್ಲವೋ ಎನ್ನುವುದು ನನ್ನ ಗಂಡನಿಗೆ ಗೊತ್ತು. ಪರಿಹಾರದ ಹಣಕ್ಕೂ ನಮಗೂ ಸಂಬಂಧ ಇಲ್ಲದಿದ್ದರೂ 1 ನೇ ಎದುರುದಾರರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.